"ಇರೋದು ಒಬ್ಬ ಮಗಳು. ಕೈತುಂಬಾ ವರದಕ್ಷಿಣೆ ಕೊಟ್ಟು, ದುಡಿದಿರೋದೆಲ್ಲಾ ಮಗಳಿಗೆ ಕೊಡ್ತಾರೆ ಅಂದ್ಕೊಂಡೆ. ನಿಮ್ಮಪ್ಪ ದಿವಾಳಿ ಬ್ಯಾಚ್ ಅಂತ ನನಗೇನು ಗೊತ್ತು" ಅನ್ನೋ ಮಾತುಗಳಿಗೆ ನಾನು ಮಾಡಿರೋ ತಪ್ಪಿಗೆ ಇದಕ್ಕಿಂತ ಬೇರೆ ಶಿಕ್ಷೆ ಬೇಕಿತ್ತಾ ಅನಿಸಿತ್ತು.

ಸೆಕ್ಸ್‌ಗೆ ಸಹಕರಿಸದೇ ಇದ್ದುದರಿಂದ ರಾಮ್ ಅನೈತಿಕ ಸಂಬಂಧವೊಂದನ್ನು ಇಟ್ಟುಕೊಂಡರು. ಈ ಯಾತನೆಗಳ ನಡುವೆ ಒದ್ದಾಡುತ್ತಿದ್ದ ಸಮಯದಲ್ಲಿ ನನ್ನಲ್ಲಿ ಧರಣಿ ಆಗಲೇ ಮನೆ ಮಾಡಿಕೊಂಡಿದ್ದಳು. ಆ ಪುಟ್ಟ ಮಗುವನ್ನು ತುಂಬಾ ಜೋಪಾನವಾಗಿ ಕಾಪಾಡಿಕೊಂಡು ಬಂದೆ. ಮುಂದಿನ ನನ್ನ ಕನಸುಗಳೆಲ್ಲಾ ಧರಣಿಯೇ ಅಂದುಕೊಂಡೆ. ಮನೆಗೆ ಬರೋದು ನಿಲ್ಲಿಸಿಬಿಟ್ಟ ರಾಮ್. ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿತು.

ಅವನೊಂದಿಗೆ ಬದುಕು ಸಾಕೆಂದು ಮಾಡಿಕೊಂಡ ಎಲ್ಲ ಪ್ರಯತ್ನಗಳು ವಿಫಲಗೊಳ್ಳುತ್ತಿದ್ದವು. ಮುಂದೆ ಇಂಥ ಕೆಲಸ ಮಾಡಬೇಡಾಂತ ಅಪ್ಪ ಅವನಿಂದ ಪ್ರಮಾಣ ಮಾಡಿಸಿಕೊಂಡು ಕರೆದುಕೊಂಡು ಬಂದರು. ರಾಮ್ ಡೈವೋರ್ಸ್ ಕೊಟ್ಟರು. ಮಧ್ಯದಲ್ಲಿ ಅಲ್ಪವಿರಾಮ ಹಾಕಿದ್ದ ನನ್ನ ವಿದ್ಯಾಭ್ಯಾಸ ಮುಂದುವರೆಯಿತು. ಯುಎಸ್‌ಎಂ ಕಂಪೆನಿಯಲ್ಲಿ ಒಳ್ಳೆಯ ಕೆಲಸ ಪಡೆದುಕೊಂಡೆ. ಆಗಿಂದಲೇ ಸಂಜೀವ್ ಪರಿಚಯ. ಅವರ ಬಗ್ಗೆ ಒಳ್ಳೇ ಅಭಿಪ್ರಾಯ ಮೂಡಲು ತುಂಬಾ ಸಮಯ ಬೇಕಾಗಲಿಲ್ಲ. ಅತ್ಯಂತ ಕಡಿಮೆ ಸಮಯದಲ್ಲಿ ಮನಸ್ಸಿಗೆ ತುಂಬಾ ಹತ್ತಿರ ಆಗಿದ್ದರು. ಪ್ರತಿ ಹಂತದಲ್ಲೂ ಸಹಾಯ ಮಾಡುವ ಸಂಜೀವ್ ಬಗ್ಗೆ ಅಭಿಮಾನ, ಗೌರವ ದಿನದಿಂದ ದಿನಕ್ಕೆ ಬೆಳೆಯುತ್ತಿತ್ತು.

ಆದರೆ ಸಂಜೀವನದು ಯಾವಾಗಲೂ ಒಂದು ಮನವಿ: "ಸ್ರವಂತಿ, ಒಂದು ಹೊಸ ಜೀವನ ಪ್ರಾರಂಭ ಮಾಡು. ನಿನಗೇನು ವಯಸ್ಸಾಗಿದೆಂತ?" ಅವರ ಮಾತುಗಳಿಗೆ ಸಣ್ಣಗೆ ನಕ್ಕು ತಪ್ಪಿಸಿಕೊಳ್ಳುತ್ತಿದ್ದೆ.

ಅಮ್ಮನಿಗೆ ಪಾರ್ಶ್ವವಾಯು ಆಗಿ ಹಾಸಿಗೆ ಹಿಡಿದಿದ್ದಳು. ಅಪ್ಪ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ನನ್ನ ಒಂದು ಹಂತಕ್ಕೆ ತಂದು ನಿಲ್ಲಿಸಿದರು. ಈಗ ನಮ್ಮ ಬದುಕು ಸುಧಾರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಈಗ ಆ ಕುಟುಂಬಕ್ಕೆ ನನ್ನ ಅವಶ್ಯಕತೆ ಇದೆ. ಮತ್ತೆ ನಾನು ಮದುವೆ ಮಾಡಿಕೊಂಡು ಹೊರಟು ಹೋದರೆ, ಮದುವೆ ಮಾಡಿಕೊಂಡ ವ್ಯಕ್ತಿ ಇವರಿಗೆ ಸಹಾಯ ಮಾಡಲು ಒಪ್ಪಿಕೊಳ್ಳದಿದ್ದರೆ ಇವರ ಪರಿಸ್ಥಿತಿ? ಇದು ನನ್ನ ಮನಸ್ಸಿನ ತೊಳಲಾಟ. ದಿನ ನಿತ್ಯದ ಸಂಘರ್ಷ.

"ಅಪ್ಪ, ಅಮ್ಮನಿಗೋಸ್ಕರ ಜೀವನ ಹಾಳು ಮಾಡ್ಕೊತೀಯಾ? ಮದುವೆ ಕೇವಲ ದೈಹಿಕ 'ಅಗತ್ಯ' ಮಾತ್ರ ಅಲ್ಲ, ಮಾನಸಿಕವಾಗಿ ಕೂಡ ಅವಶ್ಯಕ. ನಿಮ್ಮ ಅಪ್ಪನ್ನ ನೋಡು, ಅಮ್ಮ ಬೆಡ್ ಮೇಲೆ ಇದ್ದರು ಕೂಡ ಎಷ್ಟೊಂದು ಸಪೋರ್ಟ್ ಮಾಡ್ತಾ ಇದ್ದಾರಲ್ಲ. ಹಾಗೆಯೇ ನಿನ್ನ ನೋಡಿಕೊಳ್ಳೋಕೆ ನಿನಗೂ ಒಂದು ನೆರಳು ಬೇಡವಾ ಸ್ರವಂತಿ. ನನಗೆ ಗೊತ್ತಿರೋ ಮ್ಯಾರೇಜ್ ಬ್ಯೂರೋ ಇವೆ. ಒಳ್ಳೇ ಮ್ಯಾಚ್‌ಗೆ ಟ್ರೈ ಮಾಡ್ತಿನಿ" ಅಂತ ತುಂಬಾ ಸಲ ಹೇಳಿದರೂ ತಾನು ಅದನ್ನು ತಿರಸ್ಕರಿಸುತ್ತಾ ಬಂದಾಗ ಬೇಸತ್ತಿದ್ದ ಸಂಜೀವ್.

ಒಂದು ದಿನ, "ಈ ಭೂಮಿ ಮೇಲೆ ನಿಮ್ಮಂಥ ಒಳ್ಳೆಯ ಫ್ರೆಂಡ್ ಇದ್ದರೆ ಸಾಕು. ಜೀವನವನ್ನ ಎಷ್ಟೇ ಕಷ್ಟ ಬಂದರೂ ಸುಲಭವಾಗಿ ಸಾಗಿಸಬಹುದು" ಎಂದಿದ್ದಳು.

"ಕವಿತೆ ಹೇಳಬೇಡ ಸ್ರವಂತಿ. ಇದು ಜೀವನ. ಇದಕ್ಕಿಂತ ಹೆಚ್ಚಿಗೆ ಸಹಾಯ ಮಾಡಿದರೆ ಬೇರೆಯದೇ ಅರ್ಥ ಹುಡುಕುತ್ತಾರೆ. ಸಂಬಂಧ ಕಟ್ಟುತ್ತಾರೆ. ಇದು ಇಬ್ಬರಿಗೂ ಒಳ್ಳೆಯದಲ್ಲ.